ಓ ಎಸ್ ನಂ. **126/2017**
ಪಿ ಡಬ್ಲ್ಯೂಃ **4**

**ದಿಃ 07.11.2022 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಆರ್.ಎಸ್.ಎಂ ವಕೀಲರಿಂದಃ**

ಸದರಿ ದಾವಾ ಸ್ವತ್ತನ್ನು ಖರೀದಿಸಲೆಂದು ಕರಾರು ಮಾಡಿಕೊಂಡಿದ್ದೆವು, ಆದಕಾರಣ ಈ ದಾವೆಯನ್ನು ಹೂಡಿರುತ್ತೇನೆ. ಸದರಿ ದಾವೆಯನ್ನು ಸರೋಜಮ್ಮ ಎಂಬುವರ ಮೇಲೆ ಹೂಡಿರುತ್ತೇನೆ. ಸದರಿ ದಾವೆಯ ಅನುಸೂಚಿ ಸ್ವತ್ತಿನ ಸಂಖ್ಯೆಯು ನನಗೆ ಗೊತ್ತಿರುವುದಿಲ್ಲ. ದಾವೆಯ ಅನುಸೂಚಿ ಸ್ವತ್ತಿನ ಅಳತೆ ಹಾಗೂ ಚಕ್ಕುಬಂದಿಯನ್ನು ಹೇಳಲು ನನಗೆ ಬರುವುದಿಲ್ಲ. ಸದರಿ ದಾವಾ ಸ್ವತ್ತು ಸರೋಜಮ್ಮ ಹಾಗೂ ಅವರ ಗಂಡ ಏಕಾಂತಪ್ಪನವರ ಹೆಸರಿನಲ್ಲಿದೆ. ಸದರಿ ದಾವಾ ಸ್ವತ್ತಿನ ಖಾತೆಯು ಪ್ರತಿವಾದಿ ಹಾಗೂ ಅವರ ಗಂಡನ ತಮ್ಮನಾದ ವೆಂಕಟೇಶನವರ ಹೆಸರಿನಲ್ಲಿದೆ ಎಂದರೆ ಸರಿ. ವಾದಿಯ ಗಂಡನಾದ ಏಕಾಂತಪ್ಪ ಹಾಗೂ ವೆಂಕಟೇಶನರವರ ತಂದೆ ಹೆಸರು ತಮ್ಮಣ್ಣ ಎಂದರೆ ಸರಿ. ದಾವಾ ಸ್ವತ್ತು ತಮ್ಮಣ್ಣ ಎಂಬುವರಿಗೆ ಸೇರಿದೆ ಎಂದರೆ ಸರಿ. ದಾವಾ ಸ್ವತ್ತು ತಮ್ಮಣ್ಣನವರದ್ದಾರಿಂದ ತಮ್ಮಣ್ಣನವರ ಮಗ ಏಕಾಂತಪ್ಪ ಕಾಲವಾದ ಕಾರಣ ಪಿತ್ರಾರ್ಜಿತ ಆಸ್ತಿಯಾದ್ದರಿಂದ ದಾವಾ ಸ್ವತ್ತು ಪ್ರತಿವಾದಿಗೂ ಹಾಗೂ ವೆಂಕಟೇಶ ಈರ್ವರಿಗೂ ಜಂಟಿಯಾಗಿ ಖಾತೆಯಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಮಕ್ಕಳನ್ನಾಗಲೀ ಅಥವಾ ವೆಂಕಟೇಶ ಮತ್ತು ಅವರ ಮಕ್ಕಳನಾಗಲೀ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯ ಮಕ್ಕಳನ್ನಾಗಲೀ ಅಥವಾ ವೆಂಕಟೇಶ ಮತ್ತು ಅವರ ಮಕ್ಕಳನಾಗಲೀ ದಾವೆಯಲ್ಲಿ ಪಕ್ಷಕಾರರನ್ನಾಗಿ ಸೇರಿಸದೇ ಇರುವ ಕಾರಣ ಈ ದಾವೆಯು ಊರ್ಜಿತವಲ್ಲ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತನ್ನು ದಿಃ06.01.2009 ರಂದು ಜಯಮ್ಮ ಬಿನ್ ದೊಡ್ಡಯ್ಯ ಎಂಬುವರಿಗೆ 2 ವರ್ಷಗಳ ಭೋಗ್ಯಕ್ಕೆ ನೀಡಿದ್ದರೂ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹೊಸದುರ್ಗ.